# ಮುಚ್ಚುವ ಭೀತಿಯಲ್ಲಿ ರಟ್ಟಿನ ಪೆಟ್ಟಿಗೆ ಉದ್ಯಮ

**ಬೆಂಗಳೂರು:** ಕೆಲವೇ ತಿಂಗಳ ಅವಧಿಯಲ್ಲಿ ಗಣನೀಯ ವೆಚ್ಚ ಹೆಚ್ಚಳ ಮತ್ತು ಕಚ್ಚಾ ವಸ್ತು ಪೂರೈಕೆ ವ್ಯತ್ಯಯ ಹೀಗೆ ಅವಳಿ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ಕಾರ್ಯುಗೇಟೆಡ್ ಬಾಕ್ಸ್ ಉದ್ಯಮ ಇಂದು ಮುಚ್ಚುವ ಭೀತಿ ಎದುರಿಸುತ್ತಿದೆ.

ಪೆಟ್ಟಿಗೆ ಉತ್ಪಾದಕರ ಒಟ್ಟು ವೆಚ್ಚ ಈಗಾಗಲೇ ಕಾಗದದ ಕಾರಣದಿಂದಲೇ ಶೇ.70ರಷ್ಟು ಹೆಚ್ಚಿದ್ದು, ಈ ಹೆಚ್ಚಳ ಏರುತ್ತಲೇ ಇದೆ. ಮುಖ್ಯ ಕಚ್ಚಾವಸ್ತು ಎನಿಸಿದ ಕ್ರಾಫ್ಟ್ ಪೇಪರ್ ವೆಚ್ಚ ಹೆಚ್ಚಳದಿಂದಾಗಿ ಇಡೀ ಉದ್ಯಮ ಸಂಕಷ್ಟಕ್ಕೆ ಸಿಲುಕಿದೆ.

ಬೇಡಿಕೆಯ ಅಂತರ ಹಾಗೂ ಚೀನಾದಲ್ಲಿರುವ ಆಕರ್ಷಕ ಬೆಲೆ ಕಾರಣದಿಂದ ಭಾರತೀಯ ಕ್ರಾಫ್ಟ್‌ಪೇಪರ್ ಕಂಪನಿಗಳ ಉತ್ಪನ್ನಗಳು ದೇಶೀಯ ಮಾರುಕಟ್ಟೆಯಿಂದ ವಿಮುಖವಾಗುತ್ತಿವೆ. ಇದು ಕಾಗದ ಮತ್ತು ಪುನರ್ ಬಳಕೆ ಫೈಬರ್‌ಗಳ ವೆಚ್ಚ ಹೆಚ್ಚಳಕ್ಕೆ ಕಾರಣವಾಗಿದೆ. ಭಾರತೀಯ ಕ್ರಾಫ್ಟ್ ಪೇಪರ್ ಮಿಲ್‌ಗಳು ಮಾಡುವ ಪುನರ್ ಬಳಕೆ ಮಾಡಲಾದ ಕ್ರಾಫ್ಟ್‌ಪೇಪರ್ ಪಲ್ಪ್‌ಗಳ ರಫ್ತಿನ ಪ್ರಮಾಣ ಈ ವರ್ಷ ಸುಮಾರು 20 ಲಕ್ಷ ಟನ್‌ನಷ್ಟು ಹೆಚ್ಚಿದೆ. ಇದು ಭಾರತೀಯ ಕ್ರಾಫ್ಟ್‌ಪೇಪರ್ ಉತ್ಪಾದನಾ ಘಟಕಗಳ ಒಟ್ಟು ಉತ್ಪಾದನೆಯ ಶೇ.20ರಷ್ಟಾಗಿದೆ. 2018ಕ್ಕೆ ಪೂರ್ವದಲ್ಲಿ ರಫ್ತಾಗುತ್ತಿದ್ದ ಪ್ರಮಾಣ ಶೂನ್ಯವಾಗಿದ್ದು, ಭವಿಷ್ಯದಲ್ಲಿ ಸಕ್ರಿಯ ಪೂರೈಕೆಯ ಮೇಲೆ ಪರಿಣಾಮ ಉಂಟಾಗಲಿದೆ ಎಂದು ಭಾರತೀಯ ರಟ್ಟಿನ ಪೆಟ್ಟಿಗೆಗಳ ಉತ್ಪಾದಕರ ಸಂಘ (ಐಸಿಸಿಎಂಎ) ಅಧ್ಯಕ್ಷ ಸಂದೀಪ್ ವಾಧ್ವಾ ಹೇಳುತ್ತಾರೆ.

> **ಇದು ಒಂದು ಪರಿಸರ ಸ್ನೇಹಿ ಉದ್ಯಮವಾಗಿದ್ದು ಪ್ರತಿ ವರ್ಷ ಸುಮಾರು 75 ಲಕ್ಷ ಟನ್ ಪುನರ್ಬಳಕೆಯ ಕ್ರಾಫ್ಟ್ ಪೇಪರ್‌ಗಳನ್ನು ಬಳಸುತ್ತಿದೆ ಹಾಗೂ ಶೇ.100ರಷ್ಟು ಮರುಬಳಕೆ ಮಾಡಬಹುದಾದ ರಟ್ಟಿನ ಪೆಟ್ಟಿಗೆಗಳನ್ನು ಉತ್ಪಾದಿಸಲಾಗುತ್ತಿದ್ದು, ಸುಮಾರು 27,000 ಕೋಟಿ ರೂ.ಗಳ ಮಾರುಕಟ್ಟೆಯಾಗಿದೆ.**
>
> ■ **ಹರೀಶ್ ಮದನ್**, ಉಪಾಧ್ಯಕ್ಷ, ಐಸಿಸಿಎಂಎ.